ಹಳೆಯದಾಗಿದ್ದು ಹಾಗೂ ಜಲಸಂಗ್ರಹಾಲಯಗಳ ಒಟ್ಟು ಸಾಮರ್ಥ್ಯ ಕಡಿಮೆ ಇರುವುದರಿಂದ ನಗರದಲ್ಲಿ ಪ್ರತಿ ನಾಲ್ಕು ದಿವಸಗಳಿಗೊಮ್ಮೆ ತಲಾ 50 ಗ್ಯಾಲನ್ (273 ಲೀಟರ್) ನೀರು ಸರಬರಾಜು ಮಾಡಲಾಗುತ್ತಿದೆ.

ಇ) ಇಲ್ಲ.

**ವಿಷಯ:-** ದ.ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆ ಮಾಡಲ್ಪಡುವ ಕೈಗಾರಿಕೆಗಳಿಗೆ ಭೂಸ್ವಾಧೀನ.

56(96)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಬೃಹತ್ ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಒಟ್ಟಾರೆ ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲು ಭೂಮಿ ಸ್ವಾಧೀನಪಡಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಭೂಮಿ ಸ್ವಾಧೀನಪಡಿಸುವಾಗ ಸಾರ್ವಜನಿಕರಿಂದ ಪ್ರತಿಭಟನೆ ಬಂದಿರಲಿಲ್ಲವೆ, ಬಂದಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?(ವಿವರ ನೀಡುವುದು).

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು):-

ಅ) ಒಟ್ಟು 4386-73 ಎಕರೆಗಳು. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:

| ಕ್ರಮ ಸಂಖ್ಯೆ | ತಾಲ್ಲೂಕು | ಘಟಕ:ಕೈಗಾರಿಕಾ ಪ್ರದೇಶ | ಭೂಸ್ವಾಧೀನಪಡಿಸಿ ಕೊಂಡಿರುವ ಜಮೀನು |
|---|---|---|---|
| 1. | ಮಂಗಳೂರು | ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಲಿ. (ಎಂಸಿಎಫ್) | 193-99 |
| 2. | ಮಂಗಳೂರು | ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್) | 154-93 |
| 3. | ಮಂಗಳೂರು | ಮಂಗಳೂರು ರಿಫೈನರಿ, ಪೆಟ್ರೋ ಕೆಮಿಕಲ್ಸ್ (ಎಂಆರ್‌ಪಿಎಲ್) | 1506-83 |
| 4. | ಮಂಗಳೂರು | ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ. (ಹೆಚ್‌ಪಿಸಿಎಲ್) | 438-96 |
| 5. | ಮಂಗಳೂರು | ಬಿ.ಎ.ಎಸ್.ಎಫ್ | 201-86 |
| 6. | ಮಂಗಳೂರು | ಭಾರತ್ ಪೆಟ್ರೋಲಿಯಂ ಕರ್ಪೊರೇಷನ್ ಲಿ. (ಬಿಪಿಸಿಎಲ್) | 69-45 |
| 7. | ಮಂಗಳೂರು | ಜೆಸ್ಕೋ | 615-52 |

ಒಟ್ಟು 3181-54 ಗುಂಟೆ ಆಗುತ್ತದೆ. ಮೇಲ್ಕಂಡ ಕೈಗಾರಿಕೆಗಳು ಅಲ್ಲದೆ ಬೈಕಂಪಾಡಿ ಕೈಗಾರಿಕಾ ಪ್ರದೇಶಕ್ಕೆ 1050-17 ಎಕರೆ ಜಮೀನುಗಳನ್ನು ಮಂಗಳೂರು ತಾಲ್ಲೂಕಿನಲ್ಲಿ 1970-71ನೇ ಸಾಲಿನಲ್ಲಿ ಸ್ವಾಧೀನಗೊಳಿಸಲಾಗಿದೆ. ಹಾಗೂ ಇದು ಅಲ್ಲದೆ ಕಾರ್ನಾಡುನಲ್ಲಿ 65-02 ಎಕರೆ ಮತ್ತು ಶಿವಳ್ಳಿಯಲ್ಲಿ 90-00 ಎಕರೆಯನ್ನು ಕೈಗಾರಿಕಾ ಪ್ರದೇಶ ಅಭಿವೃದ್ಧಿಗಾಗಿ ಭೂಸ್ವಾದೀನ ಪಡಿಸಿಕೊಳ್ಳಲಾಗಿದೆ.

ಆ) ಬಂದಿತು. ಇದನ್ನು ಮಂಡಳಿ ಹಾಗೂ ಸರ್ಕಾರವು ಸಹಾನುಭೂತಿಯಿಂದ ಪರಿಶೀಲಿಸಿ, ಸೂಕ್ತ ಪರಿಹಾರ ನೀಡಿ, ನಂತರ ಭೂಸ್ವಾಧೀನ ಕಾರ್ಯವನ್ನು ಮುಂದುವರಿಸಿದೆ.

**ವಿಷಯ:-** ದ.ಕನ್ನಡ ಜಿಲ್ಲೆಯಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕಾ ಷೆಡ್ಡುಗಳು.

57(98)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕಾ ಶೆಡ್ಡುಗಳ ಸಂಖ್ಯೆ ಎಷ್ಟು;

ಆ) ಸದರಿ ಶೆಡ್ಡುಗಳನ್ನು ಯಾರಿಗೆ ಯಾವಾಗ ಹಂಚಲಾಗಿದೆ ; (ವಿವರ ನೀಡುವುದು);

ಇ) ಈ ಶೆಡ್ಡುಗಳಲ್ಲಿ ಕಾರ್ಯನಿರ್ವಹಿಸದೆ ಖಾಲಿ ಇರುವ ಶೆಡ್ಡುಗಳ ಸಂಖ್ಯೆ ಎಷ್ಟು?

ಶ್ರೀ ಬಿ.ಎ. ಮೊಹಿದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ) 315.

ಆ) ವಿವರವಾದ ಪಟ್ಟಿಯನ್ನು ಲಗತ್ತಿಸಿದೆ.

ಇ) 27.